# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 280
2. ಸದಸ್ಯರ ಹೆಸರು : **ಡಾ॥ ವೈ.ಎ. ನಾರಾಯಣಸ್ವಾಮಿ**
3. ಉತ್ತರಿಸಬೇಕಾದ ದಿನಾಂಕ : 14.09.2021
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

***

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ 2 ವರ್ಷಗಳಲ್ಲಿ ಶ್ರೀನಿವಾಸಪುರ ಎ.ಪಿ.ಎಂ.ಸಿ.ಯಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ಸರ್ಕಾರದಿಂದ ಬಿಡುಗಡೆ ಮಾಡಿರುವ ಮೊತ್ತ ಎಷ್ಟು; | ಕಳೆದ 2 ವರ್ಷಗಳಲ್ಲಿ ಶ್ರೀನಿವಾಸಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎ.ಪಿ.ಎಂ.ಸಿ)ಯಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ಒಟ್ಟಾರೆ ರೂ.123.48 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. |
| ಆ | ಈ ಮೊತ್ತವನ್ನು ಯಾವ ಕಾಮಗಾರಿಗಳಿಗಾಗಿ ಉಪಯೋಗಿಸಲಾಗುತ್ತಿದೆ;<br>(ವಿವರ ನೀಡುವುದು) | ಈ ಮೊತ್ತವನ್ನು ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 2 ಮುಚ್ಚು ಹರಾಜುಕಟ್ಟೆಗಳನ್ನು ರೂ.38.00 ಲಕ್ಷಗಳ ವೆಚ್ಚದಲ್ಲಿ, ಸಮಿತಿ ವ್ಯಾಪ್ತಿಯ ವಳಗೇರಹಳ್ಳಿ ಗ್ರಾಮೀಣ ಸಂತೆಯಲ್ಲಿ ಮುಚ್ಚು ಹರಾಜುಕಟ್ಟೆಯನ್ನು ರೂ.18.00 ಲಕ್ಷಗಳ ವೆಚ್ಚದಲ್ಲಿ ಮತ್ತು ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಆಂತರಿಕ ರಸ್ತೆ ಮತ್ತು ಚರಂಡಿಯ ಕಾಮಗಾರಿಯನ್ನು ರೂ.69.48 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ. |
| ಇ | ಮೂಲಭೂತ ಸೌಕರ್ಯಗಳಿಗಾಗಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆಯೇ; | 2020–21ನೇ ಸಾಲಿನ ನಬಾರ್ಡ್‌ನ ಡಬ್ಲ್ಯೂ.ಐ.ಎಫ್ 2014–15ರ ಯೋಜನೆಯಡಿ ರೂ.451.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಶ್ರೀನಿವಾಸಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. |
| ಈ | ಹಾಗಿದ್ದಲ್ಲಿ, ಯಾವ ಅವಧಿಯೊಳಗೆ ಪೂರ್ಣಗೊಳಿಸಲಾಗುವುದು ? | ಮೇಲಿನ ಕಾಮಗಾರಿಗೆ ದಿನಾಂಕ:14.07.2021ರಂದು 06 ತಿಂಗಳ ಕಾಲಮಿತಿ ನೀಡಿ ಕಾರ್ಯಾದೇಶ ನೀಡಲಾಗಿದೆ. ದಿನಾಂಕ:14.01.2022ರ ಒಳಗೆ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು. |

**ಸಂಖ್ಯೆ:ಸಿಒ 244 ಎಂಆರ್‌ಇ 2021**

**(ಎಸ್.ಟಿ.ಸೋಮಶೇಖರ್)**
**ಸಹಕಾರ ಸಚಿವರು**